# MYSORE LEGISLATIVE ASSEMBLY

Saturday, 19th May 1973/ Vaishakha 29,1895 S.E.

The House met in the Assembly Chamber, Vidhana Soudha, at Nine of the Clock.

MADAM SPEAKER (Smt. K. S. NAGARATHNAMMA) in the Chair.

---

## STARRED QUESTIONS

(to which oral answers were given)

## LIFT IRRIGATION SCHEME FROM MADAGADA TANK OF SHIKARIPUR TALUK

500. Sri K. YENKATAPPA (Shikaripur).—

Will the Minister for Public Works and Electricity be pleased to state:—

(a) whether lift irrigation scheme for Madagada tank and water supply scheme to the Udugani and Talgund Hoblies of Shikaripur Taluk will be taken up;

(b) Whether it has come the notice of Government that the said Udugani and Talgund hoblies are drought affected area;

(c) whether it has also come to the notice of Government that no irrigational schemes can be implemented in this area;

(d) if so, whether the said lift irrigation scheme will be taken up immediately ?

Sri H. N. NANJE GOWDA (Minister of State for Major Irrigation) [on behalf of Sri H. M. CHANNABASAPPA (Minister for Public Works and Electricity)].—

(a) No.
(b) No.
(c) Yes.
(d) No.

ಶ್ರೀ ಕೆ. ಯಂಕಟಪ್ಪ.— ಸ್ವಾಮಿ, ಇದರಲ್ಲಿ (ಅ), (ಆ) ಮತ್ತು (ಈ) ಪ್ರಶ್ನೆಗಳಿಗೆ ವಿಷಯ ಏನೂ ಹೇಳಲಿಲ್ಲ. ಒಂದಕ್ಕೆ ಮಾತ್ರ ಬಂದಿದೆ ಎಂದು ಹೇಳಿದ್ದೀರಿ. ಬಂದಿದೆ ಎನ್ನತಕ್ಕ ವಿಷಯಕ್ಕೆ, ಉಡುಗಣಿ ಮತ್ತು ತಾಳಗುಂದ ಈ ೨ ಹೋಬಳಿಗಳು ಬರಗಾಲ ಪೀಡಿತ ಪ್ರದೇಶಗಳು ಎಂದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದಿರಿ. 'ಸಿ' ಪ್ರಶ್ನೆಗೆ ಉತ್ತರವಾಗಿ ಈ ಪ್ರದೇಶಗಳಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯಗತಕ್ಕೆ ಬರಲು ಸಾಧ್ಯವಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಈ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಹೊಸದಾಗಿ ಯೋಜನೆಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವೇ, ಹಾಗೆ ಮಾಡಲಿಕ್ಕೆ ತಾವು ಪ್ರಯತ್ನ ಮಾಡುತ್ತೀರಾ?

†ಶ್ರೀ ಎಚ್. ಎನ್. ನಂಜೇಗೌಡ.— ಯಾವುದೇ ನೀರಾವರಿ ಕೆಲಸ ಮಾಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳಿದ್ದೇವೆ ಮುಂದೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದೇವೆ.

ಶ್ರೀ ಕೆ. ಯಂಕಟಪ್ಪ.— ಆದರೆ ತಾವು ಈ ವಿಷಯದಲ್ಲಿ ರೆಪ್ರೆಸೆಂಟೇಷನ್ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ನನಗೂ ಸಹ ಪತ್ರ ಬರೆದಿದ್ದಾರೆ. ಮದಗದ ಕೆರೆ ಯಾತ ನೀರಾವರಿಯಿಂದ ಉಡುಗಣಿ ಮತ್ತು ತಾಳಗುಂದ ಹೋಬಳಿಗಳಿಗೆ ನೀರುಕೊಡಲು ಸರ್ವೆ ಎಸ್ಟಿಮೇಟ್ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎನ್ ನಂಜೇಗೌಡ.— ಯಾತ ನೀರಾವರಿಯಿಂದ ನೀರು ಕೊಡಬೇಕಾದರೆ ೧೩ ಮೈಲಿ ಹೋಗಬೇಕಾಗುತ್ತದೆ ಮತ್ತು ೩೦೦ ಅಡಿ ಎತ್ತರದ ಗುಡ್ಡಗಳನ್ನು ಕ್ರಾಸ್‌ಮಾಡಿ ಹೋದರೆ ಅನುಕೂಲವಾಗುವ ಪರಿಸ್ಥಿತಿ ಇದೆ. ಜಮೀನಿನ ಮಟ್ಟಕ್ಕೂ ನೀರಿನ ಮಟ್ಟಕ್ಕೂ ೨೦೦ ಅಡಿ ವ್ಯತ್ಯಾಸವಿದೆ. ಇದು ತಾಂತ್ರಿಕವಾಗಿ ಸೂಕ್ತವಲ್ಲ ಎನ್ನುವ ಅಭಿಪ್ರಾಯ ಬಂದಿದೆ. ಆದುದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದೆ. ಈ ಎರಡು ಹೋಬಳಿಗಳಲ್ಲಿ ೨೬ ಬರಗಾಲ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ೮ ಕೆಲಸ ಮುಗಿಸಿದ್ದೇವೆ.

ಶ್ರೀ ಕೆ. ಯಂಕಟಪ್ಪ.— ತಾವು ಹೇಳಿದ ಹಾಗೆ ೨೬ ಕೆಲಸಗಳಲ್ಲಿ ೮ ಕೆಲಸ ಮುಗಿಸಿದ್ದೀರಿ, ಬಾಕಿದ್ದು ಇನ್ನೂ ಉಳಿದಿದೆ. ಇಷ್ಟು ಕೆಲಸ ಮಾಡಿದರೆ ಅಲ್ಲಿ ಮಳೆ ಕಡಿಮೆ ಇರುವುದರಿಂದ, ಆ ಪರಿಸ್ಥಿತಿಯೊಳಗೆ ಮಾಡಿದಂಥ ಕಾರ್ಯದಲ್ಲಿ ಜಯಶೀಲರಾಗುವುದಕ್ಕೆ ಸಾಧ್ಯವಾಗದೇ ಇರುವುದರಿಂದ, ೨೦೦ ಅಡಿ ತಗ್ಗಿನಿಂದ ನೀರು ಎತ್ತಿದರೆ ಎಷ್ಟು ಎಕರೆಗೆ ನೀರಾವರಿ ಆಗಬಹುದು ? ಎಸ್ಟಿಮೇಟ್ ಮಾಡಿದರೆ ಒಳ್ಳೆಯದಲ್ಲವೆ ? ಕೆಲವು ಪ್ರದೇಶಗಳಲ್ಲಿ ಬೋರ್‌ವೆಲ್ಸ್ ಸ್ಕೀಮುಗಳನ್ನು ಸರಕಾರ ತೆಗೆದುಕೊಂಡು ಬೋರವೆಲ್ಸ್ ಹಾಕಿ ಇಂತಹ ಕೆಲವು ಯೋಜನೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† Indicates that the remarks or speeches have not been revised by the member concerned.

ಶ್ರೀ ಎಚ್. ಎನ್. ನಂಜೇಗೌಡ.— ಯಾತ ನೀರಾವರಿ ಭಾರಿ ದುಬಾರಿ ಆಗುವುದಲ್ಲದೆ ತಾಂತ್ರಿಕವಾಗಿ ಅದು ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ಬಂದಿರುವುದರಿಂದ ಹಾಗೆ ಉತ್ತರ ಕೊಟ್ಟಿದೆ. ಅದನ್ನು ಪರಿಶೀಲನೆ ಮಾಡಿದ ಮೇಲೆಯೇ ಉತ್ತರ ಕೊಟ್ಟಿರುವುದು. ತಾಂತ್ರಿಕವಾಗಿ ಏನು ಮಾಡುವುದಕ್ಕೂ ಸಾಧ್ಯವಿಲ್ಲ ಎನ್ನುವ ತಕ್ಕದ್ದು ವರದಿಯಾಗಿದೆ. ಅದನ್ನು ಮಾತ್ರ ಹೇಳಿದ್ದೇನೆ.

## REHABLITATION OF WET-SWEEPERS IN SHIKARIPUR TOWN

501. Sri K. YENKATAPPA (Shikaripur).—

Will the Minister for Municipal Administration be pleased to state :—

(a) whether it is under the contemplation of the Government to demolish the present huts where wet-sweepers of Shikaripur Town are residing and to send them some where else by constructing the houses;

(b) if so, whether it is a fact that the survey No. 6 where they are residing at present was granted to some one else at upset price during the Administator's regime;

(c) the length and breadth of each site and their cost;

(d) whether it has come to the notice of the Government that this site is a prominent site in Shikaripur Town; if so, the reason for granting it at upset price;

(e) whether the revenue of the Municipality is reduced on account of this;

(f) whether the sites granted at survey Nos. 6 and 7 would be cancelled as irregularities took place during Administrator's regime;

(g) the reason for granting the sites at survey No. 6 to some one else by overlooking the wet-sweepers even through they were residing there since many years ?

Sri B. BASAVALINGAPPA (Minister for Municipal Administration).—